ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ಸಂ. ವಾತೆಜಂಆ(ಜಾ)/ಉವ/ಬೆ/ವಾ.ಶಾ./2018-19/ಬಿ-959 ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಾರ್ಯಾಲಯ
(ಜಾರಿ), ಉತ್ತರ ವಲಯ,
''ಸುಮೌಲ್ಯ ಸೌಧ'', 4ನೇ ಮಹಡಿ, ಕ್ಲಬ್ ರಸ್ತೆ,
ಬೆಳಗಾವಿ. ದಿನಾಂಕ : 24-08-2018.

**:ಪ್ರಕಟಣೆ:**

**ವಿಷಯ:** ಈ ವಿಭಾಗದ ವಿವಿಧ ಕಛೇರಿಗಳಿಗೆ ಸರಕಾರಿ ಅಧಿಕೃತ ಕೆಲಸಕ್ಕೆ 07 ಖಾಸಗಿ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಸಾಮಾನ್ಯ ಟೆಂಡರ ಪ್ರಕ್ರಿಯೆ ಮುಖೇನ ಪಡೆಯುವ ಬಗ್ಗೆ.

**ಉಲ್ಲೇಖ:** ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಇವರ ಪತ್ರ ಸಂಖ್ಯೆ: :ವಿಹೆಚ್‌ಟಿ/ಸಿಆರ್-07/2018-19 ದಿನಾಂಕ:14-08-2018

*****

ಈ ವಿಭಾಗದ ಕೆಳಕಂಡ ಕಛೇರಿಗಳಿಗೆ ದಿನಾಂಕ: 01-10-2018 ರಿಂದ 30-09-2019 ರ ಅವಧಿಗೆ ಸರ್ಕಾರಿ ಅಧಿಕೃತ ಕೆಲಸಕ್ಕೆ ಮಾಸಿಕ ಬಾಡಿಗೆ ಆಧಾರದ ಮೇಲೆ 07 (ಏಳು) ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳು ಅವಶ್ಯಕತೆ ಇರುತ್ತದೆ.

| ಕ್ರಮ ಸಂಖ್ಯೆ | ಕಛೇರಿ ಹೆಸರು | ವಾಹನಗಳ ಸಂಖ್ಯೆ | ಅರ್ಜಿ ಸಲ್ಲಿಸಬೇಕಾದ ಕಛೇರಿ |
|---|---|---|---|
| 1 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ. | 06 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ,''ಸುಮೌಲ್ಯ ಸೌಧ'', 4ನೇ ಮಹಡಿ, ಕ್ಲಬ್ ರಸ್ತೆ, ಬೆಳಗಾವಿ. |
| 2 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾರಿ), ವಿಜಯಪುರ | 01 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾರಿ), ವಿಜಯಪುರ |

ಸದರಿ ವಾಹನಗಳನ್ನು ಪೂರೈಸಲು ಷರತ್ತುಗಳು ಈ ಕೆಳಗಿನಂತಿವೆ.

**ಷರತ್ತುಗಳು:-**

1) ದಿನಾಂಕ: 01-10-2018 ರಿಂದ 30-09-2019ರ ಅವಧಿಗೆ ಅನ್ವಯವಾಗುವಂತೆ, ಈ ಸುತ್ತೋಲೆಯನ್ನು ಅನುಬಂಧದಲ್ಲಿ ನಿಗದಿಪಡಿಸಿರುವ ಒಟ್ಟು 7 (ಏಳು) ಸಂಖ್ಯೆಯ ಖಾಸಗಿ ವಾಹನಗಳ ಸೇವೆಯನ್ನು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು ಅಧಿಕೃತ ಟ್ರಾವೆಲ್ ಏಜೆನ್ಸಿ/ ಸಂಸ್ಥೆ ಮುಖಾಂತರ ಅಥವಾ ಮಾಲೀಕರೇ ಚಾಲಕರಾಗಿರುವ ಪದ್ಧತಿಯಂತೆ ಸಾಂಪ್ರದಾಯಿಕ ಟೆಂಡರ್ ಪ್ರಕ್ರಿಯೆ ಮೂಲಕ ಕೆ.ಟಿ.ಪಿ.ಪಿ. ಕಾಯ್ದೆಗೆ ಅನುಗುಣವಾಗಿ ಬಾಡಿಗೆಗೆ ಪಡೆದುಕೊಳ್ಳಬಹುದಾಗಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ: 30-09-2018ರ ಒಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.
2) 2014 ಮತ್ತು ನಂತರದ ಮಾದರಿಯ ವಾಹನಗಳನ್ನು ಮಾತ್ರ ಪರಿಗಣಿಸಲಾಗುವುದು.
3) ದಿನಾಂಕ: 01-10-2018 ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದಿಲ್ಲ.
4) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ-96 ಶಿವಾನೀ 2012 ಬೆಂಗಳೂರು ದಿನಾಂಕ:23-08-2012 ರಲ್ಲಿ ನಿಗದಿಪಡಿಸಿರುವ ಬಾಡಿಗೆ ದರ ಹಾಗೂ ಷರತ್ತಿಗೊಳಪಟ್ಟು ವಾಹನಗಳನ್ನು ಬಾಡಿಗೆಗೆ ಪಡೆಯಲಾಗುವುದು.
5) ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವಾಗ ಈ ಇಲಾಖೆಯ ಸುತ್ತೋಲೆ ಸಂಖ್ಯೆ: ವಿಹೆಚ್/ ಸಿಆರ್-20/ 2013-14 ದಿನಾಂಕ: 30-09-2014 ರಲ್ಲಿ ಹೇಳಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

24/8/18

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ),
ಉತ್ತರ ವಲಯ, ಬೆಳಗಾವಿ.